ಅನುಬಂಧ

ಹುಕ್ಕೇರಿ ತಾಲ್ಲೂಕಿನಲ್ಲಿ ಮೇಲ್ದರ್ಜೆಗೇರಿಸಿರುವ ರಸ್ತೆಗಳ ವಿವರ ಹಾಗೂ ದುರಸ್ತಿಗಾಗಿ ಮಾಡಿರುವ ವೆಚ್ಚ.

	ರಸ್ತೆಗಳ ವಿವರ	(ಲಕ್ಷ ರೂ.ಗಳಲ್ಲಿ) ಕಿ.ಮೀ ಉದ್ದ	ತುರ್ತು ದುರಸ್ತಿಗೆ ಮಾಡಿರುವ ವೆಚ್ಚ
1.	ಬೆಲ್ಲದ ಬಾಗೇವಾಡಿ ಹುಕ್ಕೇರಿ ರಸ್ತೆ	14.00	0.95
2.	ಬಾಗೇವಾಡಿ ಬೆಳಗಾವಿ ಸಾರಾಪುರ ಮುಖಾಂತರ ಚಿಕೋಡಿ ಹತ್ತರಗಿ ರಸ್ತೆಗೆ ಸೇರುವ ರಸ್ತೆ	12.00	0.24
3.	ಪಾಶ್ವಾಪುರ ರೈಲ್ವೆ ನಿಲ್ದಾಣದಿಂದ ಉಕ್ಕಡಕ್ಕೆ ಸೇರುವ ರಸ್ತೆ	16.00	0.24
4.	ರಾಕ್ಷಿಯಿಂದ ಶಿರಗಾಂವ್ ಸುಲ್ತಾನ್‌ಪುರ ರಸ್ತೆ	7.00	0.33
5.	ಮಡಲಗಾ ಶಿಪ್ಪೂರ ರಸ್ತೆ	12.00	4.13
6.	ಯಾದಗೂಡ ಗೇಟ್ ಸಂಕೇಶ್ವರ ರಸ್ತೆ	16.40	0.21
7.	ಕಣಗಾಲಾ-ಬೊಡೆಗಲರಸ್ತೆ	13.00	0.26
8.	ಬಗಟೆ ಆಲೂರದಿಂದ ಎನ್.ಹೆಚ್. 48ಕ್ಕೆ ಸೇರುವ ರಸ್ತೆ	9.20	0.69
9.	ಕೊಠಳಿ ಸಂಕೇಶ್ವರ ರಸ್ತೆ (ಹುಕ್ಕೇರಿ ವ್ಯಾಪ್ತಿ)	6.40	0.34
10.	ಯಾದಗೂಡ ಬರಗಾಂವ್ ಬೆಳಕೂಡದಿಂದ ಎಂ.ಎಸ್. ರಸ್ತೆಗೆ ಸೇರುವ ರಸ್ತೆ (ಹುಕ್ಕೇರಿ ವ್ಯಾಪ್ತಿ)	2.00	0.06
	ಒಟ್ಟು	08.00	7.45

ಕೃಷ್ಣ ಮೇಲ್ದಂಡೆ ಯೋಜನೆಯ ಪ್ರಗತಿ

2255: ಶ್ರೀ ಬಸವನಗೌಡ ಪಾಟೀಲ್, (ಮಾನ್ವಿ):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣ ಮೇಲ್ದಂಡೆ ಯೋಜನೆಯ ಅಡಿಗಲ್ಲನ್ನು ದಿ:ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ಯಾವ ವರ್ಷದ ದಿನದಂದು ನೆರವೇರಿಸಿದರು; ಈ ಅಣೆಕಟ್ಟಿನ ಕೆಲಸಕ್ಕೆ ಯಾವ ವರ್ಷ ಕೇಂದ್ರ ಸರ್ಕಾರವು ಆಡಳಿತಾತ್ಮಕ ಒಪ್ಪಿಗೆ ನೀಡಿತು; ಎಂದಿನಿಂದ ಕೆಲಸ ಪ್ರಾರಂಭಿಸಲಾಗಿದೆ;

ಆ) ಕೃಷ್ಣಾ ಮೇಲ್ದಂಡೆ ಯೋಜನೆ ಆಡಳಿತಾತ್ಮಕ ಮಂಜೂರಾತಿ ನೀಡಿದಾಗ ಯಾವ ಯಾವ ಹಂತದ ಯಾವ ಘಟ್ಟಗಳಲ್ಲಿ ಯಾವ ಯಾವ ಕೆಲಸಗಳನ್ನು ಕಾರ್ಯಗತ ಮಾಡಲು ಉದ್ದೇಶಿಸಲಾಗಿತ್ತು; ಅಂದಿನ ಒಟ್ಟು ಅಂದಾಜು ವೆಚ್ಚವೆಷ್ಟು;

ಇ) ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿಶ್ವ ಬ್ಯಾಂಕಿನ ಆರ್ಥಿಕ ನೆರವು ಯಾವ ವರ್ಷದಿಂದ ದೊರಕಿಸಿಕೊಳ್ಳಲಾಗಿದೆ. ಇಂದಿನವರೆಗೂ ವಿನಿಯೋಗಿಸಲಾಗಿರುವ ಮೊತ್ತವೆಷ್ಟು; ನಾರಾಯಣಪುರ ಅಣೆಕಟ್ಟಿನ ಬಲದಂಡೆಯ ಕಾಲುವೆಯ ನಿರ್ಮಾಣ ಕಾರ್ಯವನ್ನು ಈ ವರ್ಷವೇ ಪ್ರಾರಂಭಿಸಲಾಗುವುದೇ; ಸ್ಪಷ್ಟಪಡಿಸಬೇಕು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಅಡಿಗಲ್ಲನ್ನು ದಿವಂಗತ ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿಯವರು ದಿನಾಂಕ 22-5-1964ರಂದು ನೆರವೇರಿಸಿದರು. ಈ ಯೋಜನೆಗೆ ಕೇಂದ್ರ ಸರ್ಕಾರದ ಯೋಜನಾ ಆಯೋಗವು 1963ರಲ್ಲಿ ಒಪ್ಪಿಗೆ ನೀಡಿತು. ಯೋಜನೆಯ ಕಾಮಗಾರಿಯನ್ನು 1968-69ರಲ್ಲಿ ಪ್ರಾರಂಭಿಸಲಾಯಿತು.

ಆ) 1963ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾದ 58.20 ಕೋಟಿ ರೂ.ಗಳ ಅಂದಾಜಿನ ಈ ಯೋಜನೆಯು ಸಮಗ್ರ ಯೋಜನೆಯಾಗಿದ್ದು. ಅದರಲ್ಲಿ ನಾರಾಯಣಪುರ ಅಣೆಕಟ್ಟು ಮತ್ತು 6 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವ ನಾರಾಯಣಪುರ ಎಡದಂಡೆ ಕಾಲುವೆ ಕಾಮಗಾರಿಗಳು ಅಡಕವಾಗಿದ್ದವು.

ಇ) ಯೋಜನೆಯ ಮೊದಲ ಘಟ್ಟದ ಮೊದಲ ಹಂತಕ್ಕೆ 1978 ರಿಂದ 86ರವರೆಗೆ ದೊರೆತ 117.64 ಮಿಲಿಯನ್ ಡಾಲರ್ ಮೊತ್ತದ ವಿಶ್ವ ಬ್ಯಾಂಕ್ ನೆರವನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಲಾಗಿದೆ. 1989ರಿಂದ ಕಾರ್ಯಗತಗೊಳ್ಳುತ್ತಿರುವ ಯೋಜನೆಯ ಮೊದಲ ಘಟ್ಟದ 2ನೇ ಹಂತಕ್ಕೆ 245 ಮಿಲಿಯನ್ ಡಾಲರ್ ಮೊತ್ತದ ನೆರವನ್ನು ವಿಶ್ವ ಬ್ಯಾಂಕಿನಿಂದ ಪಡೆಯಲಾಗುತ್ತಿದೆ. 1993ರ ಫೆಬ್ರವರಿ ಕೊನೆಯವರೆಗೆ ವಿಶ್ವ ಬ್ಯಾಂಕ್‌ನಿಂದ 36.54 ಮಿಲಿಯನ್ ಡಾಲರ್ ಮೊತ್ತವನ್ನು ಮರುಪಾವತಿಯಾಗಿ ಪಡೆಯಲಾಗಿದೆ. ನಾರಾಯಣಪುರ ಬಲದಂಡೆ ಕಾಲುವೆಯು, ಇನ್ನೂ ಮಂಜುರಾತಿ ದೊರಕಬೇಕಾಗಿರುವ, ಕೃಷ್ಣಾ ಮೇಲ್ದಂಡೆ ಯೋಜನೆಯ 2ನೇ ಘಟ್ಟದಲ್ಲಿ ಬರುತ್ತದೆ. ಅದನ್ನು ಈ ವರ್ಷ ಪ್ರಾರಂಭಿಸುವ ಕಾರ್ಯಕ್ರಮವಿರುವುದಿಲ್ಲ.

ಬಾದಾಮಿಗೆ 110 ಕೆ.ವಿ. ಸ್ಟೇಷನ್ ಮಂಜೂರಾತಿ

2110: ಶ್ರೀ ಎಂ.ಕೆ. ಪಟ್ಟಣಶೆಟ್ಟಿ, (ಬಾದಾಮಿ):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಾದಾಮಿಗೆ 110ಕೆವಿ ಸ್ಟೇಷನ್ ಮಂಜೂರು ಆಗಿದಯೇ, ಆಗಿದ್ದರೆ ಮಂಜೂರಾದ ದಿನಾಂಕ ಹಾಗೂ ವಿವರ ನೀಡುವುದು.

ಆ) ಕೆಲಸವನ್ನು ಯಾವಾಗ ಪ್ರಾರಂಭ ಮಾಡಲಾಗುವುದು;

ಇ) ಆಯವ್ಯಯದಲ್ಲಿ ಕಾಯ್ದಿರಿಸಲಾಗಿರುವ ಹಣವೆಷ್ಟು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಹೌದು, ಮಂಜೂರು ಆಗಿದೆ. ಅಕ್ಟೋಬರ್ 1991ರಲ್ಲಿ ಮಂಡಳಿಯ ತಾಂತ್ರಿಕ ಸಮಿತಿ ಒಪ್ಪಿಗೆ ನೀಡಿದೆ.

ಆ) 1993-94ರ ಸಾಲಿನಲ್ಲಿ ಕೆಲಸವನ್ನು ಪ್ರಾರಂಭಿಸಲಾಗುವುದು.